3

ಕಳ್ಳನಿಗೆ ಸಂಭಾವನೆ

ಮತ್ತು

ಇತರ ಕಥೆಗಳು

(ದ್ವಿತೀಯ ಮುದ್ರಣ)

ಕಥೆಗಳು:

೧. ಕಳ್ಳನಿಗೆ ಸಂಭಾವನೆ, ೨ ಮೋಹಾಂಧ ಸಿಂಹ, ೩. ಭಾವನೆಯ ಮೃತ್ಯು, ೪. ಬಿರುಗಾಳಿಯಲ್ಲಿಯೂ ಮಲಗಬಲ್ಲ ಕಿಟ್ಟು, ೫. ಅಪರಾಜಿತ ದಾನ, ೬. ಸತ್ಯ ಮತ್ತು ಅಸತ್ಯ, ೭. ಸೃಷ್ಟಿಯ ಸಂದೇಶ.

ಕತೆಗಾರರು:

ಸಾನೆಗುರೂಜಿ, ಮುಕುಲ ಭಾಯಿ, ಮುಕುಂದ ಭಾಯಿ.

1956.

ಒಂದಾಣೆ ಮಾಲೆ

'ಒಂದಾಣೆ ಮಾಲೆ'ಯ ಪ್ರಕಟಣೆಗಳು:

೧. *ಕೆಪ್ಪಟರಾಯ (ವಿನೋದ ಕಥೆ)
೨. *ನಾರೀಶ್ವರರು (ಏಕಾಂಕ ಪ್ರಹಸನ)
೩. ಕಳ್ಳನಿಗೆ ಸಂಭಾವನೆ (ದ್ವಿ. ಮುದ್ರಣ)
೪. *ಸದ್ರಿಸುಬ್ಬ (ಏಕಾಂಕ ಪ್ರಹಸನ)
೫. ಅದ್ಭುತ ತ್ಯಾಗ (ದ್ವಿತಿಯ ಮುದ್ರಣ)
೬. *ಚುನಾವಣೆ ಅರ್ಥಾತ್ ಬನಾವಣೆ
೭. *'ಬೀಡಿ ಸೇದಬೇಡಿ' ಮತ್ತು 'ಆ ಮಗು'
೮. *ಇಂಗ್ಲಿಷ್-ಕನ್ನಡ ಅರ್ಥಕೋಶ
೯. *ಲಂಚಕ್ಕೆ ಸಂಚಕಾರ
೧೦. *ಟಿಶ್ಯೂ ಔಷಧಿಗಳ ಕೈಪಿಡಿ.
೧೧. ಶ್ರೀಕ್ಷೇತ್ರ ಧರ್ಮಸ್ಥಳ (ತೃ. ಮುದ್ರಣ)
೧೨. ಜೀವದ ಮೌಲ್ಯ ಮತ್ತು ಇತರ ಕಥೆಗಳು
೧೩. ಸತ್ತವನ ಸೇಡು ಮತ್ತು ಇತರ ಕಥೆಗಳು
೧೪. *ವೆಂಕಟನ ಸಂಕಟ (ಏಕಾಂಕ ಪ್ರಹಸನ)
೧೫. ಬಾಬಿಗೆ ಬಾಸಿಂಗ (ಏಕಾಂಕ ಪ್ರಹಸನ)
೧೬. ವೇಣೂರಿನ ಗತವೈಭವ (ದ್ವಿ. ಮುದ್ರಣ)
೧೭. ಒಗಟುಗಳು [ದ್ವಿತೀಯ ಮುದ್ರಣ]
೧೮. ಜಗಳಗಂಟ ಮತ್ತು ಇತರ ಕಥೆಗಳು
೧೯. ರಥೋತ್ಸವ.
೨೦. ಕರಿನಾಯಿ ಮತ್ತು ಮುಪ್ಪು
೨೧. *ಭಾರತದ ಮಹಾನಗರಗಳು (ಭಾಗ ೧)
೨೨. *ತಿರುಕ್ಕುರಲ್
೨೩. ಸೂರ್ಯನ ಸಂಸಾರ
೨೪. *ಭಾರತದ ಮಹಾನಗರಗಳು (ಭಾಗ ೨)
೨೫. ಧೈರ್ಯ ಮತ್ತು ಇತರ ಸತ್ಯಕಥೆಗಳು.
೨೬. *ಮಾರಾವತಾರ
೨೭. ಹಾಸವಿಲಾಸ (ನಗೆಹನಿಗಳು)
೨೮. ಸತ್ಯವಂತ ಬಾಜಿ (ಏಕಾಂಕ ಪ್ರಹಸನ)
೨೯. ಜಾಣ್ಮೆಯ ಒಗಟುಗಳು
೩೦. ಜಾತಕ ಕಥೆಗಳು
೩೧. ಕಾರ್ಕಳದ ಚರಿತ್ರೆ
೩೨. ಮರ್ಜಿ (ಏಕಾಂಕ ಪ್ರಹಸನ)
೩೩. ದರ್ಶನದ ಕಥೆಗಳು
೩೪. ಆಳುವಿನ ಹೊಳೆ ಮತ್ತು ಕೇಶವಭೂಪ
೩೫. ಶರಾಬಿನ ಪೀಪಾಯಿಗಳು
೩೬. ಉಪದೇಶ ಶತಕ
೩೭. ನಿಮಗೆ ಗೊತ್ತಿದೆಯೇ?
೩೮. ಚತುರರ ಚಮತ್ಕಾರ
೩೯. ಸತೀ ಸಾವಿತ್ರಿ [ಕಥೆಗಳು
೪೦. ಆಭರಣಗಳ ಪೆಟ್ಟಿಗೆ, ಮತ್ತು ಇತರ
೪೧. ಭಾರತದ ಮಂತ್ರಿಮಂಡಲಗಳು (ದ್ವಿ.
೪೨. ಕಾಲುಬಳೆಯ ಕಥೆ [ಮುದ್ರಣ)
೪೩. ಭಾರತದ ನಾಲ್ಕು ಕಲಶಗಳು
೪೪. ವ್ಯಸನದಿಂದ ಲಾಭ ಮತ್ತು ಇತರ
೪೫. ಸುಭಾಷಿತ [ಕಥೆಗಳು
೪೬. ೧೮೫೭ರ "ಸಿಪಾಯಿ ದಂಗೆ"
೪೭. ಅಕಾಂಡ ತಾಂಡವ (ರೇಡಿಯೋ ನಾಟಕ)
೪೮. ಸಾಹಸದ ಕಥೆಗಳು
೪೯. ಸಂಜ್ಞಾ ಜ್ಞಾನ ಕೋಶ
೫೦. ಪಂಡಿತನ ಪಿಟಲು
೫೧. ಭೋಗಯಾತ್ರೆ
೫೨. ಸಂಗ್ರಾಮಸಿಂಹ
೫೩. ಧರ್ಮ ಶಿಕ್ಷಾ
೫೪. ಮಹಾತ್ಮ
೫೫. ಮೀರಾಬಾಯಿ (ಏಕಾಂಕ ನಾಟಕ)
೫೬. ವೀರರಮಣಿ ಕರ್ಮದೇವಿ
೫೭. ಅರಳಿದ ನಗು
೫೮. ಸಚಿತ್ರ ಜಪಾನ್
೫೯. ಚುಟ್ಟಬಿಟ್ಟಧಿಟ್ಟ (ಏಕಾಂಕ ಪ್ರಹಸನ)
೬೦. ನಿರಪರಾಧಿ
೬೧. ಭಕ್ತವಾಣಿ
೬೨. ಜಾನಪದ ಸಾಹಿತ್ಯ
೬೩. ಡಾಕ್ಟರ್ ಆರೋಗ್ಯವರ್
೬೪. ಲೌಕಿಕ ನ್ಯಾಯಗಳು
೬೫. ಶಿಶುಪಾಲ ಮಾನಭಂಗ
೬೬. ಜರಾಸಂಧ ವಧೆ
೬೭. ಜವಾಹರಲಾಲರ ಜೀವನ ಚರಿತ್ರೆ
೬೮. ಕರುಣೆ ಮತ್ತು ಇತರ ಕಥೆಗಳು
೬೯. ಶ್ರೀಕ್ಷೇತ್ರ ಉಡುಪಿ
೭೦. ವಿನೋದ ವಿಹಾರ
೭೧ ಭಾರತದ ಗತವೈಭವ
೭೨. ಸತ್ಯ ಹರಿಶ್ಚಂದ್ರ
೭೩. ಸೂಕ್ತಿಗಳು.
೭೪ ಉ. ಕ. ದ ಯಕ್ಷಗಾನ ಕಲಾವಿದರು
೭೫. ದೇವರ ಸಾಮ್ರಾಜ್ಯದಲ್ಲಿ...

* ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಕಳ್ಳನಿಗೆ ಸಂಭಾವನೆ

ಮತ್ತು

ಇತರ ಕಥೆಗಳು

೧. ಕಳ್ಳನಿಗೆ ಸಂಭಾವನೆ

ಅಮೇರಿಕದಲ್ಲಿ ಸ್ವಾತಂತ್ರ್ಯಕ್ಕಾಗಿ ಯುದ್ಧ ನಡೆಯುತ್ತಿದ್ದಾಗ ಒಬ್ಬನಲ್ಲಿ ಒಂದು ಕಳವಾಯಿತು. ಆಗ ಅವನು ಈ ಕೆಳಗಿನಂತೆ ವೃತ್ತ ಪತ್ರಿಕೆಯಲ್ಲಿ ಜಾಹೀರಾತು ಕೊಟ್ಟನು:

"ಮೊನ್ನೆ ೫ನೆಯ ತಾರೀಕಿನ ದಿನ, ಯಾರೋ ಒಬ್ಬನು ನನ್ನಲ್ಲಿಯ ತೊಗಲುಗಳ ಮೂಟೆಯನ್ನು ಕದ್ದುಕೊಂಡು ಹೋಗಿದ್ದಾನೆ. ಆ ಕಳ್ಳನಿಗೆ ನಾನು ತಿಳಿಯಪಡಿಸಲು ಇಚ್ಛಿಸುವುದೇನೆಂದರೆ, — ಈ ಕಳವಾದ ಸೊತ್ತಿನ ಮ್ಹಾಲಕನು ಕಳವು ಮಾಡಿದ ಮನುಷ್ಯನೊಡನೆ ಮಿತ್ರತ್ವ ಬೆಳಸಿಕೊಳ್ಳ ಬೇಕೆಂದು ಅಂತಃಕರಣಪೂರ್ವಕ ಇಚ್ಛಿಸುತ್ತಾನೆ. ಬಡತನದ ಕಾರಣ ದಿಂದಲೇ ಹೊಟ್ಟೆಯ ಬಗ್ಗೆ ಅವನು ಕಳವುಮಾಡಿರಬಹುದಾದ್ದರಿಂದ, ಆದರ ಮ್ಹಾಲಕನು ಈ ಸಂಗತಿಯನ್ನು ಬೇರೆ ಯಾರಿಗೂ ತಿಳಿಸಲು ಇಚ್ಛಿಸುವು ದಿಲ್ಲ. ಇಷ್ಟೇ ಅಲ್ಲ; ಕಳವು ಮಾಡಿದವನ ಮನಸ್ಸಿಗೆ ಹೆಚ್ಚಿನ ಶಾಂತಿಯು ಸಿಗುವಂತೆ ಮಾಡಲಿಕ್ಕೆ ಅವಶ್ಯವಿರುವ ಸಹಾಯವನ್ನು ಮಾಡುವ ಮತ್ತು ಅವನ ಜೀವನವು ನಿಶ್ಚಿಂತತೆಯಿಂದ ನಡೆಯುವಂತೆ ಅನುಕೂಲ ಮಾಡಿ ಕೊಡುವ ಜವಾಬುದಾರಿಯನ್ನು ಆನಂದದಿಂದ ವಹಿಸಲು ತಯಾರಿದ್ದಾನೆ."

ಕೆಲವು ದಿನಗಳ ನಂತರ ಒಂದು ರಾತ್ರಿ ೯ ಘಂಟೆಗೆ ಆ ಮ್ಹಾಲಕನ ಮನೆಬಾಗಿಲನ್ನು ಯಾರೋ, ಮೆಲ್ಲನೆ ತಟ್ಟಿದರು. ಮ್ಹಾಲಕನು ಬಾಗಿಲು ತೆರೆದನು. ಒಬ್ಬ ಮನುಷ್ಯನು ಹೆಗಲಿನ ಮೇಲೆ ಒಂದು ಚರ್ಮದ ಹೊರೆ ಯನ್ನು ಹೊತ್ತು ನಿಂತಿದ್ದನು. ಅವನು ನಾಚಿಕೆಯಿಂದ ತಲೆ ಕೆಳಗೆ ಮಾಡಿ ಹೇಳಿದನು: "ನಾನು ನಿಮ್ಮ ಚರ್ಮದ ಹೊರೆಯನ್ನು ತಿರುಗಿ ತಂದಿದ್ದೇನೆ. ಇದನ್ನು ಎಲ್ಲಿ ಇಡಬೇಕೆಂದು ತಿಳಿಸಿರಿ."

ಮಾಲಕನು ಹೇಳಿದನು: "ತಮ್ಮಾ, ಸ್ವಲ್ಪ ನಿಲ್ಲು. ನಾನು ದೀಪವನ್ನು ಹಚ್ಚಿ ತರುತ್ತೇನೆ. ನನ್ನ ವಖಾರಿಯಲ್ಲಿ ಇದನ್ನು ಒಯ್ದು ಹಾಕುವ. ಅನಂತರ ತಿರಿಗಿ ಬಂದು ಶಾಂತವಾಗಿ ಮಾತಾಡುವ."

ಅವರು ವಖಾರಿಯಲ್ಲಿ ಹೊರೆಯನ್ನು ಇಟ್ಟು ಬರುವಷ್ಟರಲ್ಲಿ ಮಾಲಕನ ಹೆಂಡತಿಯು ಮೇಜಿನ ಮೇಲೆ ಬಿಸಿಬಿಸಿ ಕಾಫಿ ಮತ್ತು ತಿಂಡಿ ತಯಾರಿಸಿ ಇಟ್ಟಿದ್ದಳು.

ಕಳವು ಮಾಡಿದವನಿಗೆ ಬಹಳ ಪಶ್ಚಾತ್ತಾಪವಾಯಿತು. ಅವನು ಕೆಳಮುಖ ಮಾಡಿಯೇ ಹೇಳಿದನು: "ನಾನು ಕಳವು ಮಾಡಿದುದು ಇದೇ ಮೊದಲನೆಯದು. ಆ ಬಗ್ಗೆ ನನಗೆ ಬಹಳ ನಾಚಿಕೆಯಾಗಿದೆ; ಮತ್ತು ಪಶ್ಚಾತ್ತಾಪವೂ ಆಗಿದೆ. ನನಗೆ ಕಳವು ಮಾಡುವ ದುರ್ಬುದ್ಧಿ ಹೇಗೆ ಬಂತೋ ತಿಳಿಯದು. ನಿಜವಾಗಿಯೂ ಮದ್ಯವು ಬಹಳ ಕೆಟ್ಟದ್ದು. ಅದು ಮನುಷ್ಯನನ್ನು ರಾಕ್ಷಸನನ್ನಾಗಿ ಮಾಡಿಬಿಡುತ್ತದೆ. ನನಗೆ ಮದ್ಯ ಕುಡಿವ ಚಟಬಿತ್ತು. ಕಂಡ ಕಂಡವರೊಡನೆ ಹೊಡೆದಾಡಲು ಹತ್ತಿದೆ. ಆ ಮೇಲೆ ತಪ್ಪು ಮಾರ್ಗಕ್ಕೂ ಇಳಿದೆ. ನಾನು ಪತಿತನಾದೆ. ನನ್ನನ್ನು ಕಂಡರೆ ಯಾರಿಗೂ ಆಗದು. ನನಗೆ ಸಹಾಯ ಮಾಡಲು ಮುಂದಾದವರು ನೀವು ಒಬ್ಬರೇ. ಪರಮಾತ್ಮನು ನಿಮಗೆ ಕಲ್ಯಾಣ ಮಾಡಲಿ. ಮದ್ಯಕ್ಕಾಗಿ ನಾನು ಕಳವು ಮಾಡಬೇಕಾಯಿತು. ನನ್ನ ಆಯುಷ್ಯದಲ್ಲಿ ಇದೇ ನನ್ನ ಮೊದಲನೆಯ ಕಳವು."

ಮಾಲಕನು ಹೇಳಿದನು: "ತಮ್ಮಾ, ಇದು ನಿನ್ನ ಕಟ್ಟ ಕಡೆಯ ಕಳವೆಂದೇ ತಿಳಿ. ನಾನು ಇದನ್ನು ಯಾರಿಗೂ ಹೇಳುವುದಿಲ್ಲ. ಇನ್ನು ಮುಂದೆ ಮದ್ಯ ಮುಟ್ಟುವುದಿಲ್ಲವೆಂದು ನನಗೆ ವಚನ ಕೊಡು. ನಾನು ನಾಳೆಯೇ ನಿನಗೆ ತಕ್ಕಷ್ಟು ಸಂಬಳ ಕೊಟ್ಟು ನೌಕರಿ ಕೊಡುತ್ತೇನೆ. ಈಗ ಹಿಂದಿನದನ್ನೆಲ್ಲ ಮರೆತುಬಿಡು. ಈಗ ಸ್ವಲ್ಪ ಊಟ ಮಾಡು. ಮತ್ತು ಬಿಸಿ ಬಿಸಿ ಕಾಫಿ ಕುಡಿ. ನಿನ್ನ ಹೆಂಡತಿ–ಮಕ್ಕಳ ಕಲ್ಯಾಣಕ್ಕಾಗಿ ನೀನು ಈಗ ಸುಧಾರಿಸಿಕೊಳ್ಳು."

ಕೆಲವು ದಿನಗಳಲ್ಲಿಯೇ ಆ ಕಳವು ಮಾಡಿದವನು ಸದಾಚಾರಿಯಾದನು. ಮತ್ತು ತನ್ನ ಕುಟುಂಬವನ್ನು ಚೆನ್ನಾಗಿ ನಡೆಸಿಕೊಂಡು ಹೋಗ ಹತ್ತಿದನು.

("ಲೋಕಜೀವನ"ದಲ್ಲಿ ಮುಕುಲಭಾಯಿ.)

೨. ಮೋಹಾಂಧ ಸಿಂಹ

ಒಂದು ಅಡವಿಯಲ್ಲಿ ಒಂದು ಸಿಂಹವಿತ್ತು. ಆ ಅಡವಿಯಲ್ಲಿ ನಿತ್ಯವೂ ಒಬ್ಬ ಕಟ್ಟಿಗೆ ಹೊರೆಯುವವನು ಬಂದು ಹೋಗುತ್ತಿದ್ದನು. ಸಿಂಹವು ಅವನ ಮಗಳನ್ನು ನೋಡಿತು. ಅದಕ್ಕೆ ಅವಳ ಮೇಲೆ ಮೋಹ ಹುಟ್ಟಿತು. ಒಂದು ದಿನ ಅದು ಅವಳ ತಂದೆಯೊಡನೆ, ಅವಳನ್ನು ತನಗೆ ಮದುವೆ ಮಾಡಿ ಕೊಡಲು ಕೇಳಿತು.

ಕಟ್ಟಿಗೆ ಹೊರೆಯುವವನು ಸಿಂಹವನ್ನು ನೋಡಿ ಹೆದರಿದನು. ಅದರ ಬೇಡಿಕೆಯನ್ನು ಕೇಳಿ ಅವನ ಗಾಬರಿಯು ಮತ್ತಷ್ಟು ಹೆಚ್ಚಾಯಿತು. ತನ್ನ ಮಗಳನ್ನು ಸಿಂಹಕ್ಕೆ ಮದುವೆ ಮಾಡಿಕೊಡಲು ಅವನ ಮನಸ್ಸು ಒಪ್ಪಲಿಲ್ಲ. ಸಿಂಹಕ್ಕೆ ಹೆದರಿ ಮಗಳನ್ನು ಕೊಟ್ಟುಬಿಡಲಿಕ್ಕೆ ಬಂದೀತೆ? ಹೀಗೆ ಅವನು ಯೋಚಿಸಿ, ಧೈರ್ಯ ತಂದುಕೊಂಡು, ಸಿಂಹಕ್ಕೆ ಹೇಳಿದನು: "ನೋಡು ವನರಾಜಾ, ನೀನು ಹೇಳುವಂತೆ ಮಾಡಲು ನನಗೆ ಇಷ್ಟವಿಲ್ಲ; ದಯ ಮಾಡಿ ಕ್ಷಮಿಸು."

ಇದನ್ನು ಕೇಳಿ ಸಿಂಹವು ಗರ್ಜಿಸಿತು. ಅದು ರೊಚ್ಚಿಗೆದ್ದು ಹೇಳಿತು: "ನನ್ನ ಮಾತಿಗೆ ಎದುರು ಮಾತಾಡುತ್ತೀಯಾ? ನಾನು ಸಿಂಹ ಎಂಬುದು ನಿನಗೆ ಗೊತ್ತಿದೆಯೆ?"

ಕಟ್ಟಿಗೆ ಹೊರೆಯುವವನಿಗೆ ಮೈಯಲ್ಲಿ ನಡುಕ ಹುಟ್ಟಿತು. ಅವನು ಹೇಳಿದನು: "ಸಿಂಹರಾಜಾ, ವಿಚಾರ ಮಾಡಿ ನೋಡು. ನನ್ನ ಮಗಳು ಬಲು ಸರಳಸ್ವಭಾವದ ಎಳೆ ಬಾಲಕಿ. ನಿನ್ನ ವಿಕರಾಲವಾದ ಉಗುರುಗಳನ್ನು ಮತ್ತು ಭಯಂಕರವಾದ ಹಲ್ಲುಗಳನ್ನು ನೋಡಿ ಅವಳು ಹೆದರುತ್ತಾಳೆ. ಅಂದ ಮೇಲೆ ಅವಳನ್ನು ನಿನಗೆ ಹೇಗೆ ಮದುವೆ ಮಾಡಿ ಕೊಡಲಿ?"

"ಅಷ್ಟೇ ಅಲ್ಲವೇ? ಹಾಗಾದರೆ ನಾನು ನನ್ನ ಉಗುರುಗಳನ್ನೂ ಹಲ್ಲುಗಳನ್ನೂ ಕಿತ್ತು ಹಾಕಿದರೆ ತೀರಿತಲ್ಲ? ಬೇರೆ ಏನಾದರೂ ಆಕ್ಷೇಪವಿದ್ದರೆ ಹೇಳು," ಎಂದು ಸಿಂಹವು ಹೇಳಿತು.

"ಶಹಬಾಸ್, ಅಷ್ಟಾದ ಮೇಲೆ ಯಾವ ಆಕ್ಷೇಪವೂ ಇರುವುದಿಲ್ಲ," ಎಂದು ಕಟ್ಟಿಗೆ ಹೊರೆಯುವವನು ಹೇಳಿದನು.

ಸಿಂಹವು ಇದನ್ನು ಕೇಳಿ, ಸಂತೋಷದಿಂದ ಓಡುತ್ತ ಹೋಯಿತು. ಮತ್ತು ತನ್ನ ಉಗುರುಗಳನ್ನೂ ಹಲ್ಲುಗಳನ್ನೂ ಕೀಳಿಸಿ ಬಿಟ್ಟಿತು. ಹೆಣ್ಣಿನ ಮೋಹಕ್ಕಾಗಿ ಇಷ್ಟು ಮಾಡುವುದು ಬಹಳ ದೊಡ್ಡ ಮಾತೇ?

ಹಲ್ಲು-ಉಗುರುಗಳನ್ನು ಕಳಕೊಂಡ ಸಿಂಹವು ಕಟ್ಟಿಗೆ ಹೊರೆಯುವನ ಬಳಿಗೆ ತಿರುಗಿ ಬಂದು ಹೇಳಿತು, "ಸರಿ, ಈಗ ನಿನ್ನ ಮಗಳನ್ನು ನನಗೆ ಕೊಟ್ಟು ಬಿಡು."

ಕಟ್ಟಿಗೆ ಹೊರೆಯುವನು ತಯಾರಾಗಿಯೇ ನಿಂತಿದ್ದನು. ಸಿಂಹಕ್ಕೆ ಹಲ್ಲೂ ಇಲ್ಲ, ಉಗುರೂ ಇಲ್ಲ, ಎಂದು ನೋಡಿ ತಿಳಿದನು. ಇನ್ನು ಹೆದರಿಕೆ ಏಕೆ? ಅವನು ಸಿಂಹವನ್ನು ಕುರಿತು, "ಮದುಮಗನಾಗಿ ಬಂದಿದ್ದೀಯಾ!" ಎಂದು ಕೇಳುತ್ತಿದ್ದಂತೆ, ತನ್ನ ಕೈಯಲ್ಲಿಯ ಕೊಡಲಿಯಿಂದ ಸಿಂಹಕ್ಕೆ ನಾಲ್ಕಾರು ಕಡೆಗಳಲ್ಲಿ ಕಡಿದನು.

ಸಿಂಹಕ್ಕೆ ತನ್ನ ತಪ್ಪು ತಿಳಿದು ಬಂತು. ಹೇಗಾದರೂ ಮಾಡಿ, ಜೀವ ಹಿಡಿದುಕೊಂಡು ಪಲಾಯನ ಮಾಡಿತು.

ಪ್ರೇಮಾಂಧರಾದರೆ, ಸಿಂಹದಂಥ ಪ್ರಬಲರಿಗೂ ಕೂಡ ಇಂಥ ಹೀನ ದೆಶೆಯು ಪ್ರಾಪ್ತವಾಗುತ್ತದೆ.

('ಲೋಕಶಿಕ್ಷಣ'ದಲ್ಲಿ ಮಗನಬಾಯಿ ದೇಸಾಯಿ.)

■■■■■■■■

೩. ಭಾವನೆಯ ಮೃತ್ಯು

ಒಬ್ಬ ಯುವಕನು ತನ್ನ ತಾಯಿಯ ನಿಧನದ ಮರುದಿನ ಸ್ಮಶಾನದಲ್ಲಿ ತನ್ನ ತಾಯಿಯ ಅಸ್ಥಿಸಂಚಯ ಮಾಡುತ್ತಲಿದ್ದನು. ಬೆಂಕಿಯಲ್ಲಿ ಸುಡದೆ ಉಳಿದಿರುವ ಎಲುಬಿನ ಚೂರುಗಳನ್ನು ಉದಾಸ ಮುಖದಿಂದ ಕೆಳಮೋರೆ ಮಾಡಿ ಆರಿಸಿ ಬೇರೆಯಾಗಿ ಇರಿಸುತಿದ್ದನು.

ಇಷ್ಟರಲ್ಲಿ ಸ್ಮಶಾನ ಭೂಮಿಯ ಹೊಲೆಯನು ಅಲ್ಲಿಗೆ ಬಂದನು. ಯುವಕನ ಕಣ್ಣುಗಳಲ್ಲಿ ನೀರು ಹರಿಯುತ್ತಿರುವುದನ್ನೂ ಅವನ ಮೋರೆಯು ಬಾಡಿರುವುದನ್ನೂ ನೋಡಿ ಹೊಲೆಯನು ಕೇಳಿದನು: "ಏನು ಮಾಡುತ್ತಿರುವಿ?"

ಯುವಕನು ಅಳುಮೋರೆಯಿಂದಲೇ ಹೇಳಿದನು: "ನನ್ನ ತಾಯಿಯು ತೀರಿಹೋಗಿದ್ದಾಳೆ."

ಹೊಲೆಯನು ಕೇಳಿದನು: "ಹಾಗಾದರೆ ಸುಟ್ಟ ಎಲುಬುಗಳನ್ನು ಕೂಡಹಾಕುವುದರಿಂದ ಮತ್ತು ಬೂದಿಯನ್ನು ಬೇರೆಮಾಡುವುದರಿಂದ ಏನು ಪ್ರಯೋಜನ?"

"ನಾನು ಈ ಎಲುಬುಗಳನ್ನು ಪವಿತ್ರವಾದ ಗಂಗಾನದಿಯಲ್ಲಿ ಚೆಲ್ಲುವೆನು. ಇದರಿಂದ ನನ್ನ ತಾಯಿಗೆ ಸದ್ಗತಿಯು ಸಿಗುವುದು," ಎಂದು ಯುವಕನು ಉತ್ತರವಿತ್ತನು.

"ಹಸೀ ಸುಳ್ಳು! ಸತ್ತು ಬೂದಿಯಾಗಿರುವ ನಿನ್ನ ತಾಯಿಗೆ ಇನ್ನು ಸದ್ಗತಿ ಹೇಗೆ ದೊರಕೀತು? ನಿನ್ನ ಈ ಕ್ರಿಯಾ ಕರ್ಮದ ಉದ್ದೇಶವು ಬೇರೆ ಏನಾದರೂ ಇರಬಹುದು," ಎಂದು ಹೊಲೆಯನು ಹೇಳಿದನು.

ಯುವಕನು ಹೇಳಿದನು: "ನಿನಗೆ ಈ ವಿಚಾರವು ಸರಿತೋರುವುದಿಲ್ಲವಪ್ಪ. ಇರಲಿ. ಮೀನುಗಳಿಗಾದರೂ ಸ್ವಲ್ಪ ಖಾದ್ಯ ಸಿಗಲೆಂದು ನಾನು ಈ ಎಲುಬುಗಳನ್ನು ನದಿಯಲ್ಲಿ ಚೆಲ್ಲುವೆನು."

ಹೊಲೆಯನು ಹೇಳಿದನು: ಸುಟ್ಟ ಎಲುಬಿನಲ್ಲಿ ಖಾದ್ಯವಿರುವುದು ಶಕ್ಯವೇ ಇಲ್ಲ. ಬೇರೆ ಏನಾದರೂ ಕಾರಣವಿರಬಹುದು."

ಯುವಕನು ಹೇಳಿದನು: "ನೀನು ಹೇಳಿದಂತೆಯೇ ಆಗಲಪ್ಪ. ಬೇರೆ ಕಾರಣವೂ ಇದೆ. ಇಲ್ಲಿ ಸ್ವಚ್ಛಮಾಡುವುದರಿಂದ ಇದೇ ಸ್ಥಳದಲ್ಲಿ ಬೇರೆ ಜನರಿಗೂ ಹೆಣ ಸುಡಲಿಕ್ಕೆ ಅನುಕೂಲವಾಗುವುದು. ನೋಟಕ್ಕೂ ಚಂದ ಕಾಣುವುದು. ಅಲ್ಲವೇ?"

ಯುವಕನ ಈ ಉತ್ತರದಿಂದ ಹೊಲೆಯನಿಗೆ ಸಮಾಧಾನವಾಯಿತು.

("ಜೀವನ ಸಾಹಿತ್ಯ"ದಿಂದ)

---

೪. ಬಿರುಗಾಳಿಯಲ್ಲಿಯೂ ಮಲಗಬಲ್ಲ ಕಿಟ್ಟು

ಈಗ ಎಷ್ಟೋ ಕಡೆಗಳಲ್ಲಿ ದನಗಳ ಸಂತೆ ನಡೆಯುತ್ತದೆ. ಅದರಂತೆ ಹಿಂದೆ ಒಂದು ಕಾಲದಲ್ಲಿ ನೌಕರರ ಸಂತೆಯೂ ನಡೆಯುತ್ತಿತ್ತು. ನೌಕರರನ್ನು ಪಡೆಯಲಿಚ್ಛಿಸುವವರು, ನೌಕರರ ಸಂತೆಗೆ ಹೋಗಿ ಯಾವ ಕೆಲಸಕ್ಕೆ ಮತ್ತು ಯಾವ ತರದ ನೌಕರರು ಬೇಕೆಂಬುದನ್ನು ಹುಡುಕಿ ಆರಿಸಿಕೊಳ್ಳುತ್ತಿದ್ದರು.

ಮತ್ತು ಅವನಿಗೆ ಸಂಬಳವೆಷ್ಟು ಕೊಡಬೇಕೆಂಬುದನ್ನು ಅವನೊಡನೆಯೆ ಮಾತಾಡಿ ಗೊತ್ತುಪಡಿಸುತ್ತಿದ್ದರು. ಮನೆಗೆಲಸಕ್ಕೆ, ಹೊಲಗೆಲಸಕ್ಕೆ, ಮಕ್ಕಳನ್ನಾಡಿಸಲಿಕ್ಕೆ ಹೀಗೆ ಯಾವುದೇ ಕೆಲಸಕ್ಕೆ ನೌಕರರು ಬೇಕಿದ್ದರೂ ಸಂತೆಯಲ್ಲಿ ಸಿಗುತ್ತಿದ್ದರು.

ಒಂದು ದಿನ ಇಂಥ ಸಂತೆಯಲ್ಲೊಮ್ಮೆ ಒಬ್ಬ ವಿಚಿತ್ರ ಮನುಷ್ಯನು ಬಂದನು. ಅವನ ಮೋರೆಯ ಮೇಲೆ ಉತ್ಸಾಹವು ತುಂಬಿತುಳುಕುತ್ತಿತ್ತು. ಕಣ್ಣುಗಳಲ್ಲಿ ತೇಜವಿತ್ತು; ಮೈಯಲ್ಲಿ ಗಟ್ಟಿಮುಟ್ಟಾಗಿದ್ದನು; ಕೈಕಾಲುಗಳ ಸ್ನಾಯುಗಳು ಬಲವಾಗಿದ್ದುವು. ಎಲ್ಲರ ಲಕ್ಷ್ಯವೂ ಅವನ ಕಡೆಗೇ ಹೋಗುತ್ತಿತ್ತು. ಅವನ ಹೆಸರು ಕಿಟ್ಟು. ಆದರೆ ಅವನು ಚಿಲ್ಲರೆ ಮನುಷ್ಯನಲ್ಲವೆಂದು ತಿಳಿದು ಯಾರೂ ಅವನ ಹತ್ತಿರ ಚೌಕಶಿಗೆ ಹೋಗುತ್ತಿರಲಿಲ್ಲ. ಅಪ್ಪಿತಪ್ಪಿ ಯಾರಾದರೂ, "ನೀನು ಏನು ಕೆಲಸಮಾಡಬಲ್ಲೆ?" ಎಂದು ಕೇಳಿದರೆ, "ನಾನು ಬಿರುಗಾಳಿಯಲ್ಲಿ, ಭಯಂಕರ ಮಳೆಯಲ್ಲಿ ಕೂಡ ಗಾಢವಾಗಿ ನಿದ್ರಿಸಬಲ್ಲೆ," ಎಂದು ಉತ್ತರ ಕೊಡುತ್ತಿದ್ದನು. ಅವನ ಈ ಉತ್ತರವನ್ನು ಕೇಳಿ ಎಲ್ಲರಿಗೂ ಆಶ್ಚರ್ಯವಾಗುತ್ತಿತ್ತು. ಮಲಗುವ ಯೋಗ್ಯತೆಯನ್ನು ಇಷ್ಟೊಂದು ಅಭಿಮಾನದಿಂದ ಹೇಳಿಕೊಳ್ಳುವವನು ಯಾವ ಕೆಲಸಕ್ಕೂ ಬಾರದವನೆಂದು ತಿಳಿದು, ಕೇಳಿದವರೆಲ್ಲ ಸುಮ್ಮನೆ ಮುಂದರಿಯುತ್ತಿದ್ದರು.

ಆ ಊರಿನಲ್ಲಿ ಒಬ್ಬ ಮುದಿ ಒಕ್ಕಲಿಗನಿದ್ದನು. ಅವನ ಹೆಸರು ಭರಮಜ್ಜ. ಅವನಿಗೆ ಮಕ್ಕಳು ಮರಿ ಯಾರೂ ಇರಲಿಲ್ಲ; ಒಬ್ಬಂಟಿಗನಾಗಿದ್ದನು. ಹೊಲ-ಮನೆ ಏನೋ ಬಹಳವಿತ್ತು. ಮುಪ್ಪಿನ ಕಾರಣದಿಂದ ದುಡಿಯುವ ಶಕ್ತಿಯು ಕಡಮೆಯಾಗಿತ್ತು. ಆದುದರಿಂದ ಒಳ್ಳೆಯ ಆಳನ್ನು ಹುಡುಕುತ್ತಿದ್ದನು; ಪ್ರತಿಸಂತೆಗೂ ಹೋಗುತ್ತಿದ್ದನು. ಆದರೆ ಅವನ ಮನಸ್ಸಿಗೆ ತಕ್ಕ ಆಳೇ ಅವನಿಗೆ ಕಾಣಿಸುತ್ತಿರಲಿಲ್ಲ; ಎಷ್ಟೋ ಜನರನ್ನು ಇಟ್ಟುಕೊಂಡು ನೋಡಿದನು. ಒಕ್ಕಲತನ ಚೆನ್ನಾಗಿ ಬಲ್ಲೆನೆಂಬವನನ್ನು ತಂದು ಇಟ್ಟುಕೊಳ್ಳುತ್ತಿದ್ದನು. ಆದರೆ ಅವನಲ್ಲಿ ಮೈಗಳ್ಳತನ, ಅಜ್ಞಾನವನ್ನು ನೋಡಿ ಮೂರು-ನಾಲ್ಕು ದಿನಗಳಲ್ಲಿಯೇ ಅವನನ್ನು ಬಿಟ್ಟುಬಿಡುತ್ತಿದ್ದನು. "ನೀವು ಇನ್ನೂ ತರುಣರು. ನಿಮ್ಮ ಒಡೆಯನಾದ ನಾನು ತೀರ ಮುದುಕ. ನನ್ನಷ್ಟು ಕೂಡ ನಿಮ್ಮಿಂದ ದುಡಿಯಲಾಗ

ದಿದ್ದರೆ, ನಿಮ್ಮನ್ನು ಇಟ್ಟುಕೊಂಡು ಏನು ಪ್ರಯೋಜನ?" ಎಂದು ಭರಮಜ್ಜನು ಹೇಳುತ್ತಿದ್ದನು.

ಅವನ ಮನಸ್ಸಿಗೆ ತಕ್ಕ ಆಳು ಸಿಗುವ ವರೆಗೂ ಭರಮಜ್ಜನು ಪ್ರತಿಯೊಂದು ಸಂತೆಗೂ ತಪ್ಪದ ಹೋಗುತ್ತಿದ್ದನು. ಅಂದು ಭರಮಜ್ಜನು ಆ ಸಂತೆಗೆ ಹೋಗಿದ್ದನು. ಗಟ್ಟಿಮುಟ್ಟಾಗಿಯೂ, ನಗು ಮೊಗದವನಾಗಿಯೂ ಇರುವ ಆ ಕಿಟ್ಟುವಿನ ಮೇಲೆ ಅವನ ದೃಷ್ಟಿಯು ನಟ್ಟಿತು; ಮತ್ತು "ನೀನು ಏನು ಕೆಲಸ ಮಾಡಬಲ್ಲೆ?" ಎಂದು ಕೇಳಿದನು.

"ಬಿರುಗಾಳಿಯಲ್ಲಿ ಮತ್ತು ಭಾರಿ ಮಳೆಯಲ್ಲಿ ಕೂಡ ನಾನು ಗಾಢವಾಗಿ ನಿದ್ದೆ ಮಾಡಬಲ್ಲೆ," ಎಂಬ ಉತ್ತರ ಬಂತು.

ಇದನ್ನು ಕೇಳಿ ಭರಮಜ್ಜನು ದಿಗಿಲುಬಿದ್ದನು. ಈ ವಿಚಿತ್ರ ಪ್ರಾಣಿಯನ್ನು ಒಮ್ಮೆ ನೋಡಿಯಾದರೂ ಬಿಡೋಣ, ಎಂದು ಅವನು ಆಲೋಚಿಸಿದನು. ಮತ್ತು ಸಂಬಳದ ಬಗ್ಗೆ ಏನೊಂದೂ ಚೌಕಸಿ ಮಾಡದೆ ಅವನನ್ನು ಮನೆಗೆ ಕರೆದೊಯ್ದನು.

ಆ ಹುಡುಗನು ಮನಸ್ಸು ಬಿಚ್ಚಿ ಮಾತನಾಡುವುದನ್ನೂ ಕೆಲಸ ಮಾಡುವುದನ್ನೂ ನೋಡಿ ಭರಮಜ್ಜನಿಗೆ ಸಂತೋಷವಾಗುತ್ತಿತ್ತು. ತನಗೊಬ್ಬ ಆಪ್ತನೇ ಸಿಕ್ಕಿದಂತೆ ಅವನಿಗೆ ಅನಿಸಿತು. ಕಿಟ್ಟುವು ಸಹ ಆತ್ಮೀಯ ಭಾವನೆಯಿಂದ ಪ್ರತಿಯೊಂದು ಕೆಲಸವನ್ನು ಮಾಡುತ್ತಿದ್ದನು; ಒಕ್ಕಲತನದ ಜ್ಞಾನವು ಅವನಿಗೆ ಚೆನ್ನಾಗಿತ್ತು; ಪ್ರತಿಯೊಂದು ಕೆಲಸವನ್ನು ಉತ್ಸಾಹದಿಂದ ಮಾಡುತ್ತಿದ್ದನು. ಹೇಳಿದಷ್ಟನ್ನೇ ಮಾಡುವ ವೃತ್ತಿ ಅವನದ್ದಾಗಿರಲಿಲ್ಲ. ತನ್ನ ಬುದ್ಧಿಯನ್ನೂ ಉಪಯೋಗಿಸಿ ಕೆಲಸ ಮಾಡುತ್ತಿದ್ದನು.

ಇಂಥ ಒಬ್ಬ ಆಳು ಸಿಕ್ಕಿದ್ದರಿಂದ ಭರಮಜ್ಜನು ನಿಶ್ಚಿಂತನಾಗಿದ್ದನು. ಅವರಿಬ್ಬರೂ ಆನಂದದಲ್ಲಿ ಇರುತ್ತಿದ್ದರು. ಕಿಟ್ಟುವು ಸಂತೆಯಲ್ಲಿ ಕೊಟ್ಟಿದ್ದ ವಿಚಿತ್ರ ಉತ್ತರವನ್ನು ಮಾತ್ರ ಭರಮಜ್ಜನು ಮರೆತಿರಲಿಲ್ಲ. ಅದರ ಗೂಢಾರ್ಥವೇನಿರಬಹುದೆಂಬುದೂ ಅವನಿಗ ಹೊಳೆದಿರಲಿಲ್ಲ. ಅದನ್ನು ಬಾಯಿಬಿಚ್ಚಿ ಕೇಳುವ ಧೈರ್ಯವೂ ಅವನಿಗೆ ಆಗುತ್ತಿರಲಿಲ್ಲ. ಅಂಥದೊಂದು ದೊಡ್ಡ ಮಳೆಯು ಪ್ರತ್ಯಕ್ಷ ಬಂದಾಗಲೇ ನೋಡಿದರಾಯಿತು, ಎಂದುಕೊಂಡು ಸುಮ್ಮನಿದ್ದನು.

ಮಳೆಗಾಲ ಕಳೆಯಿತು. ಚಳಿಗಾಲ ಬಂತು. ಬೆಳೆಯು ಉತ್ತಮ ವಾಗಿತ್ತು. ಎಲ್ಲ ಕೆಲಸವೂ ಸಸೂತ್ರವಾಗಿ ನಡೆಯಿತು. ಬೇಸಿಗೆಯು ಸುರುವಾಯಿತು. ಗೊಣಬೆಗಳನ್ನು ಒಕ್ಕ ಹತ್ತಿದರು. ಕಾಳುಗಳನ್ನು ಬಡಿಯಹತ್ತಿದರು. ಹುಡುಗನ ದುಡಿತವನ್ನು ಕಂಡು ಭರಮಜ್ಜನು ಹಿರಿ ಹಿರಿ ಹಿಗ್ಗಿದನು. ಕಣಜಗಳೆಲ್ಲ ತುಂಬಿದ್ದನ್ನು ನೋಡಿ ಅವನಿಗೆ ಹಿಡಿಸ ಲಾರದಷ್ಟು ಆನಂದವಾಯಿತು.

ಚೈತ್ರಮಾಸವು ಬಂತು. ರಾಮನವಮಿಯು ಕಳೆಯಿತು. ಒಂದು ರಾತ್ರಿ ಬಲವಾದ ಗಾಳಿ ಬೀಸಿತು. ಮರದ ಟೊಂಗೆಗಳೆಲ್ಲ ಮೇಲು ಕೆಳ ಗಾಗ ಹತ್ತಿದವು. ಬಿರುಗಾಳಿಯು ಹಾಗೂ ಭಾರೀ ಮಳೆಯ ಲಕ್ಷಣವು ಕಂಡು ಬಂತು. ಭರಮಜ್ಜನ ನಿದ್ದೆ ಎಲ್ಲ ಹಾರಿತು; ಅನೇಕ ತರದ ಚಿಂತೆ ಗಳು ಉಂಟಾದುವು: ಕಣದಲ್ಲಿಯ ಕಾಳುಕಡ್ಡಿ ತೋಯುವುದು; ಹೊಟ್ಟು ಹಾಳಾಗುವುದು; ಇಷ್ಟು ದಿನ ಮಾಡಿದ ಶ್ರಮವೆಲ್ಲ ವ್ಯರ್ಥವಾಗುವುದು.

ಕಣವೇನೋ ಹೆಚ್ಚು ದೂರವಿರಲಿಲ್ಲ. ಆದರೆ, ಆ ಮುದುಕನು ಈ ಬಿರುಗಾಳಿಯಲ್ಲಿ ಹೊರ ಬೀಳುವುದು ಹೇಗೆ? ಕಿಟ್ಟುವನ್ನು ಎಬ್ಬಿಸಿ ಕರೆ ದೊಯ್ದರಾಯಿತು ಮತ್ತು ಕಣದಲ್ಲಿ ಹೊಟ್ಟು ಧಾನ್ಯ ತುಂಬಿಟ್ಟರಾಯಿತು, ಎಂಬ ವಿಚಾರವು ಬಂತು.

ಅವನು ಲಗುಬಗೆಯಿಂದ ಕಿಟ್ಟುವು ಮಲಗಿದಲ್ಲಿಗೆ ಬಂದನು. ಕಿಟ್ಟುವು ಗಾಢನಿದ್ರೆಯಲ್ಲಿ ಗೊರಕೆ ಹೊಡೆಯುತ್ತಿದ್ದನು. ಭರಮಜ್ಜನಿಗೆ ಸಿಟ್ಟು ಬಂತು. ಇಷ್ಟೆಲ್ಲ ಬಿರುಗಾಳಿಯು ಬೀಸುತ್ತಿದ್ದರೂ ಇದೆಂಥ ಕುಂಭ ಕರ್ಣ ನಿದ್ದೆ! ಅವನು ಕಿಟ್ಟುವನ್ನು ಒದರಿ ಕರೆದನು. ಬಿರುಗಾಳಿಯ ರಭಸಕ್ಕೂ ಎಚ್ಚರವಾಗದ ಆ ಪ್ರಾಣಿಗೆ ಈ ಮುದುಕನ ಒದರಾಟದಿಂದ ಎಚ್ಚರವಾಗುವುದುಂಟೇ? ಆಗ ಮಾತ್ರ ಭರಮಜ್ಜನಿಗೆ ಹಿಡಿಸಲಾರದ ಸಿಟ್ಟು ಬಂತು.

ಅವನು ಬಗ್ಗಿ ಕಿಟ್ಟುವನ್ನು ಅಲುಗಾಡಿಸಿದನು. ಕಿಟ್ಟುವು ಅರೆಗಣ್ಣಿ ನಿಂದ ಭರಮಜ್ಜನ ಕಡೆಗೆ ನೋಡಿ, ಮತ್ತೊಂದು ಮಗ್ಗಲಿಗೆ ತಿರುಗಿ, ಗೊರಕೆ ಹೊಡೆಯ ಹತ್ತಿದನು. ಈ ರಾಕ್ಷಸೀನಿದ್ದೆಯನ್ನು ನೋಡಿ ಭರ ಮಜ್ಜನು ಎಲ್ಲವನ್ನೂ ಮರೆತನು. ಕಿಟ್ಟುವು ಇಷ್ಟು ದಿನ ಮಾಡಿದ ದುಡಿತ, ತೋರಿಸಿದ ಆತ್ಮೀಯತೆ, ಎಲ್ಲವನ್ನೂ ಮರೆತನು.

ಇಷ್ಟರಲ್ಲಿ ಮಳೆ ಬೀಳಲು ಪ್ರಾರಂಭವಾಯಿತು. ಆಣಿಕಲ್ಲು ಬೀಳುವ ಸದ್ದು ಕೇಳಿಸಿತು. ಭರಮಜ್ಜನು ನಿರಾಶನಾದನು. ಅವನ ಮನಸ್ಸಿನಲ್ಲಿ ಸಿಟ್ಟು ಕುದಿಯುತ್ತಿತ್ತು. ಏನು ಮಾಡಬೇಕೆಂದು ಅವನಿಗೆ ಸೂಚಿಸುತ್ತಿರಲಿಲ್ಲ ಕೊನೆಗೆ, ತಾನೊಬ್ಬನೇ ಆದರೂ ಕಣದಲ್ಲಿ ಹೋಗಬೇಕೆಂದು ನಿರ್ಧರಿಸಿದನು.

ಅವನು ಕಂಬಳಿಯನ್ನು ಹುಡುಕ ಹತ್ತಿದನು. ಕಂಬಳಿಯು ಸಿಗುವಾಗ ಕಾಲು ಗಂಟೆ ಕಳೆಯಿತು. ಅವನು ಸಿಟ್ಟಿನಿಂದ ಉರಿಯುತ್ತ, ಕಂಬಳಿಯನ್ನು ಹೊದ್ದುಕೊಂಡು ಹೊರಬಿದ್ದನು.

ನಾಲ್ಕು ಹೆಜ್ಜೆ ಹೋಗುವಷ್ಟರಲ್ಲಿ ಮಳೆಯು ನಿಂತಿತು. ಆಕಾಶವು ನಿರಭ್ರವುವಾಯಿತು. "ಈಗ ಹೋಗಿಯಾದರೂ ಏನು ಪ್ರಯೋಜನ? ಎಲ್ಲವೂ ತೊಯ್ದು ಹೋಗಿರಬಹುದು," ಎಂಬ ವಿಚಾರವು ಅವನಿಗೆ ಬಂತು. "ಹೇಗಾದರೂ ಹೊರ ಬಿದ್ದಿದ್ದೇನೆ, ಹೋಗಿ ನೋಡಿ ಬಂದರಾಯಿತು," ಎಂದು ಮುಂದುವರಿದನು.

ಅವನ ಕಾಲುಗಳು ಮುಂದೆ ಹೋಗುತ್ತಿದ್ದರೂ ಅವನ ವಿಚಾರಗಳು ಕಿಟ್ಟುವನ್ನು ಶಪಿಸುತ್ತಿದ್ದವು. ಕಣಕ್ಕೆ ಹೋಗಿ ಮುಟ್ಟಿದುದು ಸಹ ಅವನಿಗೆ ಅರಿವಾಗಲಿಲ್ಲ. ಆದರೆ ಅಲ್ಲಿ ನೋಡುತ್ತಾನೆ—ಏನು ಆಶ್ಚರ್ಯ! ಅರ್ಧಮರ್ಧ ತುಳಿಸಿದ ಧಾನ್ಯವು ಹೊಟ್ಟು ಸಹ ತೋಯದಂತೆ ವ್ಯವಸ್ಥಿತವಾಗಿ ಮುಚ್ಚಿ ಇಟ್ಟಿದ್ದಿತು. ಭರಮಜ್ಜನಿಗೆ ಸಮಾಧಾನವಾಯಿತು. ಆದರೂ ಸಿಟ್ಟು ಪೂರ್ಣ ಇಳಿಯಲಿಲ್ಲ.

ಅವನು ತಿರುಗಿ ಮನೆಗೆ ಬಂದನು. ಉಳಿದ ರಾತ್ರಿಯನ್ನು ಹಾಗೂ ಹೀಗೂ ದೂಡಿದನು ಬೆಳಗ್ಗೆ ಎದ್ದೊಡನೆ ಕಿಟ್ಟುವಿಗೆ ಏನೇನು ಬೈಯಬೇಕೆಂದು ಬಾಯಿಪಾಠ ಮಾಡಹತ್ತಿದನು.

ಬೆಳಗಾಯಿತು. ಕಿಟ್ಟುವು ಪ್ರಾತರ್ವಿಧಿಯನ್ನು ಮುಗಿಸಿ, ನಿತ್ಯದಂತೆ ಉಪಾಹಾರದ ತಯಾರಿ ಮಾಡಹತ್ತಿದನು. ಅವನ ಈ ನಿಶ್ಚಿಂತತೆಯನ್ನು ಕಂಡು ಭರಮಜ್ಜನ ಸಂತಾಪವು ಹೆಚ್ಚಿತು. ಅವನು ಕಿಟ್ಟುವಿನ ಬಳಿಗೆ ಬಂದನು. ಆದರೆ, ಅವನ ಬಾಯಿಯಿಂದ ಮಾತು ಹೊರಡಲಿಲ್ಲ.

ಶಾಂತ ಸ್ವರದಲ್ಲಿಯೇ ಕಿಟ್ಟುವು ಹೇಳಿದನು: "ರಾತ್ರಿಯಲ್ಲಿ ಕರ್ಣಧಾರೆಯಾಗಿ ಮಳೆಬಿದ್ದಂತೆ ಕಾಣುತ್ತದೆ."

ಈ ಮಾತನ್ನು ಕೇಳಿ ಭರಮಜ್ಜನಿಂದ ತಡೆಯುವುದಾಗಲಿಲ್ಲ. ಅವನು ಹೇಳಿದನು: "ನೀನು ರಾತ್ರಿಯಿಡೀ ಕುಂಭಕರ್ಣನಂತೆ ಗೊರಕೆ ಹೊಡೆಯುತ್ತಿದ್ದಿ. ಮಳೆ-ಗಾಳಿಯ ಸುದ್ದಿ ನಿನಗೆ ಹೇಗೆ ತಿಳಿದೀತು?"

ಕಿಟ್ಟುವು ಸಮಾಧಾನದಿಂದಲೇ ಹೇಳಿದನು: "ನಾನು ಈ ಸಂಗತಿಯನ್ನು ನಿಮಗೆ ಮೊದಲೇ ತಿಳಿಸಿ ಬಿಟ್ಟಿದ್ದೇನೆ,—ಬಿರುಗಾಳಿಯಲ್ಲಿ, ಭಾರಿ ಮಳೆಯಲ್ಲಿ, ನಾನು ಗಾಢವಾಗಿ ಮಲಗಬಲ್ಲೆ, ಎಂದು.'

ಭರಮಜ್ಜನು ಸಂತಾಪಗೊಂಡು ಹೇಳಿದನು: "ಬಲು ಜಾಣ ನೀನು! ಹೀಗೆ ಮಲಗುವುದು ಕೂಡ ಒಂದು ದೊಡ್ಡ ವಿದ್ಯೆ ಎಂಬಂತೆ ಮಾತನಾಡುತ್ತಿ!"

ಕಿಟ್ಟುವು ವಿವರಿಸಿ ಹೇಳಿದನು: "ನಿಜವಾಗಿಯೂ, ಗಾಢವಾಗಿ ಮಲಗುವುದು ಒಂದು ಅಮೌಲ್ಯ ವಿದ್ಯೆಯೇ ಸರಿ. ಮಲಗುವ ಮುಂಚಿತವಾಗಿ ಎಲ್ಲ ವಿಚಾರ ಮಾಡಿ, ಎಲ್ಲ ಕೆಲಸ ಮಾಡಿ, ಆ ಮೇಲೆ ಎಲ್ಲ ಸಾಮಾನುಗಳನ್ನು ವ್ಯವಸ್ಥಿತವಾಗಿ ಇಟ್ಟವನೇ, ಬಿರುಗಾಳಿ ಬರಲಿ, ಭಾರಿ ಮಳೆ ಬರಲಿ, ನಿಶ್ಚಿಂತವಾಗಿ ಗಾಢ ನಿದ್ರೆ ಮಾಡಬಲ್ಲನು. ಈ ಒಂದು ಕೆಲಸವನ್ನು ನಾನು ಚೆನ್ನಾಗಿ ಕಲಿತಿರುವೆನು."

ಕಿಟ್ಟುವು ಹೀಗೆ ಒಗಟು ಬಿಡಿಸಿ ಹೇಳಿದುದನ್ನು ಕೇಳಿ ಭರಮಜ್ಜನು ಸ್ತಂಭಿತನಾದನು. ಅವನ ಸಿಟ್ಟೆಲ್ಲ ಕರಗಿ ನೀರಾಯಿತು. ಗಾಢ ನಿದ್ದೆಯ ರಹಸ್ಯವು ಅವನಿಗೆ ಚೆನ್ನಾಗಿ ಅರಿವಾಯಿತು. ಅಂದಿನಿಂದ ಅವನು ಕಿಟ್ಟುವಿನ ಮೇಲೆ ಇನ್ನೂ ಹೆಚ್ಚಿನ ಪ್ರೀತಿ ಮಾಡಹತ್ತಿದನು.

("ಸಾಧನಾ"ದಿಂದ)

■■■■■■■■

೫. ಅಪರಾಜಿತ ದಾನ

ಒಂದು ದಿನ ರಾಜನ ಬಳಿಗೆ ಒಬ್ಬ ವಿಚಿತ್ರ ಭಿಕ್ಷುವು ಬಂದು ಹೇಳಿದನು: "ರಾಜನೇ, ನೀನು ದಾನಶೂರನೆಂದು ಇಡೀ ಜಗತ್ತೇ ಹೊಗಳುತ್ತಲಿದೆ. ನೀನು ಪ್ರತಿ ನಿತ್ಯ ಒಬ್ಬ ಭಿಕ್ಷುವಿಗೆ, ಅವನು ಕೇಳಿದ ಮತ್ತು ಇಚ್ಛಿಸಿದಷ್ಟು ದಾನ ಕೊಡುವ ನಿಯಮವನ್ನು ಇಟ್ಟುಕೊಂಡಿರುವೆಯಷ್ಟೆ! ಇಂದು ನನ್ನಂಥ ಒಬ್ಬ ಕ್ಷುದ್ರ ಪ್ರಾಣಿಯನ್ನು ಸಂತುಷ್ಟಪಡಿಸಬಲ್ಲೆಯಾ?"

ರಾಜನು ಇದನ್ನು ಕೇಳಿ ನಕ್ಕುಬಿಟ್ಟನು ಭಿಕ್ಷುವು ಎಂದಿದ್ದರೂ ಭಿಕ್ಷುವೇ. ರಾಜನ ಖಜಾನೆಯಲ್ಲಿ ಧನ, ಸಂಪತ್ತು ಎಷ್ಟೊಂದು ಇರುತ್ತದೆಂಬುದು ಅವನಿಗೆ ಹೇಗೆ ತಿಳಿಯಬೇಕು? ರಾಜನು ಉತ್ತರವಿತ್ತನು: "ಭಿಕ್ಷುವೇ, ನಾನಾದರೋ ನಿಮ್ಮ ಸೇವೆಗೆ ಇಡೀ ರಾಜ್ಯದ ಭಂಡಾರವನ್ನೇ ಬರಿದು ಮಾಡಲಿಕ್ಕೂ ಸಿದ್ಧನಿದ್ದೇನೆ"

ಭಿಕ್ಷುವು ನಸುನಕ್ಕು ಕೇಳಿದನು: "ಏನು? ರಾಜ್ಯಕೋಶ? ರಾಜನೇ, ರಾಜ್ಯಕೋಶದ ಮೇಲೆ ನಿನ್ನದೇನೂ ಅಧಿಕಾರವಿಲ್ಲವಲ್ಲ! ರಾಜ್ಯಕೋಶವು ಪ್ರಜೆಗಳದು. ಪ್ರಜೆಗಳ ಸಂಪತ್ತಾಗಿರುವ ರಾಜ್ಯಕೋಶವನ್ನು ನೀನು ದಾನ ಮಾಡುವುದೆಂದರೆ ಏನು, ಸಮಂಜಸವಾದೀತೆ?"

ರಾಜನ ನಾಲಿಗೆಯು ಒಣಗಿ ಒಮ್ಮೆಗೆ ಹೊರಳದಾಯಿತು. ಸಾಮಾನ್ಯ ಭಿಕ್ಷುಕನೊಬ್ಬನಿಂದ ಪರಾಜಿತನಾಗುವುದೆ? ಅಸಾಧ್ಯ. ರಾಜನಿಗೆ ನಗೆ ಬಂತು. ಅವನು ಗರ್ವದಿಂದಲೇ ಹೇಳಿದನು: "ಭಿಕ್ಷುವೇ, ನೀನು ಈ ಅರಮನೆಯಲ್ಲಿಯ ಬೇಕಾದ ವಸ್ತುವನ್ನು ತೆಗೆದುಕೊಳ್ಳಬಹುದು. ಆನೆ, ಒಂಟೆ, ಕುದುರೆ, ಬೆಳ್ಳಿ, ಬಂಗಾರದ ಪಾತ್ರೆಗಳು ನನ್ನ ವ್ಯಕ್ತಿಗತ ಸಂಪತ್ತಾಗಿರುವುದೆಲ್ಲವನ್ನೂ ನಾನು ನಿನಗೆ ಕೊಟ್ಟುಬಿಡುತ್ತೇನೆ."

ಇದನ್ನು ಕೇಳಿ ಭಿಕ್ಷುವಿನ ಮುಖ ಮುದ್ರೆಯು ಗಂಭೀರವಾಯಿತು. ಅವನು ರಾಜನ ದೃಷ್ಟಿಯನ್ನೇ ನಿಟ್ಟಿಸುತ್ತ ಹೇಳಿದನು: "ರಾಜನೇ, ಇದೆಲ್ಲವನ್ನೂ ಪ್ರಜೆಗಳು ನಿನ್ನ ಅನುಕೂಲತೆಯ ಬಗ್ಗೆ ನಿನಗೆ ಅಣಿಮಾಡಿ ಕೊಟ್ಟಿರುತ್ತಾರೆ. (ಪ್ರಜೆಗಳ ಸೇವೆ ಮಾಡಲು ನಿನಗೆ ಅನುಕೂಲವಾಗಲೆಂದು.) ಇದರ ಮೇಲೆ ನಿನ್ನ ಅಧಿಕಾರವಿರುತ್ತದೆ ಯಾಗಿ ನೀನು ಭಾವಿಸುತ್ತಿರುವುದನ್ನು ನೋಡಿ ನನಗೆ ದುಃಖವಾಗುತ್ತದೆ."

ಈ ಮಾತಿನಿಂದ ರಾಜನಿಗೆ ಎದೆಯಲ್ಲಿ ಬಾಣ ನೆಟ್ಟಷ್ಟು ವೇದನೆಯಾಯಿತು. ಬಹುತರ ಇಡೀ ಆಯುಷ್ಯದಲ್ಲಿಯೇ ಮೊದಲನೇ ಬಾರಿ ಇಂದು ಅವನಿಗೆ ತಾನು ಇಷ್ಟೊಂದು ಅಸಮರ್ಥನೆಂಬ ಅರಿವಾಯಿತು. ಮನೆ ಮನೆ ತಿರುಗುವ ಭಿಕ್ಷುಕನೊಬ್ಬನು ಅವನನ್ನು ಸೋಲಿಸಿಬಿಟ್ಟನಲ್ಲ! ಆದರೆ, ರಾಜನಿಗೆ ಒಂದು ಹೊಸ ವಿಚಾರವು ಹೊಳೆಯಿತು. ಅವನು ಪರಮಾನಂದದಿಂದ ಎದೆ ಉಬ್ಬಿಸಿ ನಿಂತನು. ಈ ವಿಚಾರವು ತನಗೆ ಮೊದಲೇ ಏಕೆ ಬರಲಿಲ್ಲವೆಂದು ಅವನಿಗೆ ಆಶ್ಚರ್ಯವಾಯಿತು.

"ಭಿಕ್ಷುವೇ, ನಿಜವಾಗಿಯೂ ನನ್ನಿಂದ ತಪ್ಪಾಯಿತು. ಆದರೆ, ಈ ನನ್ನ ಶರೀರದ ಮೇಲಾದರೂ ನನ್ನ ಸ್ವಾಮಿತ್ವವಿರುವುದಷ್ಟೆ? ನಾನು ಈ ದೇಹವನ್ನೇ ನಿನಗೆ ಅರ್ಪಿಸಿ ಬಿಡುತ್ತೇನೆ," ಎಂದು ರಾಜನು ಹೇಳುತ್ತಿದ್ದಂತೆ ಅವನ ಮುಖಚರ್ಯೆಯು ವಿಜಯದೀಪ್ತಿಯಿಂದ ಪ್ರಫುಲ್ಲಿತವಾಯಿತು.

ಇದನ್ನು ಕೇಳಿ ಆ ಭಿಕ್ಷುಕನು ಗರ್ವದಿಂದ ನಸುನಗುತ್ತ ಪ್ರತಿ ಪ್ರಶ್ನೆಯನ್ನು ಕೇಳಿದನು: "ರಾಜನೇ, ನೀನು ಯಾವ ಋಷಿಯ ಆಶ್ರಮದಲ್ಲಿ ಶಿಕ್ಷಣ ಪಡೆದಿದ್ದೀಯೋ?"

"ಈ ಪ್ರಶ್ನೆಯನ್ನು ಕೇಳುವ ಉದ್ದೇಶವೇನು?" ಎಂದು ಚಂಚಲ ಹೃದಯದಿಂದ ರಾಜನು ಕೇಳಿದನು.

ಭಿಕ್ಷುವು ಹೇಳಿದನು: "ರಾಜನ ದೇಹದ ಮೇಲೆ ಸಮಾಜದ ಅಧಿಕಾರವಿರುತ್ತದೆ. ಆದುದರಿಂದ ಅದನ್ನು ಬೇರೆ ಒಂದು ವ್ಯಕ್ತಿಗೆ ಕೊಟ್ಟು ಬಿಡಲಿಕ್ಕೆ ಬರುವುದಿಲ್ಲ. ಇಷ್ಟೊಂದು ಜ್ಞಾನವು ನಿನ್ನಲ್ಲಿ ಇಲ್ಲವಲ್ಲ!"

ರಾಜನು, ಉಸಿರು ಕಟ್ಟಿದಂತಾಗಿ, ತಳಮಳಿಸಹತ್ತಿದನು. ಅವನಿಗೆ ತನ್ನ ಕಾಲಡಿಯ ಭೂಮಿಯೇ ಜಾರಿದಂತೆ ಭಾಸವಾಯಿತು. ತಾನು ಈಗಲೇ ಬೀಳುತ್ತೇನೋ, ಇನ್ನೊಂದು ಗಳಿಗೆಯಲ್ಲಿ ಬಿದ್ದು ಬಿಡುವೆನೋ ಎನಿಸಿತು. ಇಂಥ ನಿರಾಶೆಯ ಕಗ್ಗತ್ತಲೆಯಲ್ಲಿಯೂ ಕೂಡ, ಅವನಿಗೆ ಅಕಸ್ಮಾತ್ತಾಗಿ ಒಂದು ಸೂಕ್ಷ್ಮವಾದ ಜ್ಯೋತಿರ್ಮಯ ಕಿರಣವು ದೃಷ್ಟಿಗೆ ಬಿತ್ತು.

"ನಾನು ಈ ವರೆಗೆ ಗಳಿಸಿರುವ ಪುಣ್ಯವನ್ನೆಲ್ಲ ನಿನಗೆ ದಾನ ಕೊಟ್ಟು ಬಿಡುತ್ತೇನೆ," ಎಂದು ರಾಜನು ಹೇಳಿದನು.

ಭಿಕ್ಷುವು ಹೇಳಿದನು: "ಈ ಜನ್ಮದ ನಿನ್ನ ಪುಣ್ಯದ ಮೇಲೆ ನಿನ್ನ ಮುಂದಿನ ಜನ್ಮದ ಅಧಿಕಾರವಾಗಿ ಬಿಟ್ಟಿದೆ. ಈ ಜನ್ಮದಲ್ಲಿ ಅದನ್ನು ಖರ್ಚು ಮಾಡಲು ಎಂದೂ ಬರಲಾರದು."

ಕೊನೆಗೂ ಭಿಕ್ಷುವೇ ವಿಜಯಶಾಲಿಯಾದನು.

ಅಂದು ಸಾವಿರಾರು ಸ್ತ್ರೀ-ಪುರುಷರು ಎವೆಯಿಕ್ಕದೆ ನೋಡಿದರು. ವಿಜಯ ಗರ್ವದಿಂದ ತಲೆಯನ್ನೆತ್ತಿಕೊಂಡು ಆ ಭಿಕ್ಷುವು ಅರಮನೆಗಳ ಕಡೆಗೂ, ಮೇಲ್ಮಹಡಿಗಳ ಕಡೆಗೂ, ತುಚ್ಛ ಭಾವನೆಯಿಂದ ನೋಡುತ್ತ ನಡೆದುಬಿಟ್ಟನು. ಇಂದು ಅವನು ಒಬ್ಬ ಚಕ್ರವರ್ತಿ ಸಾರ್ವಭೌಮನನ್ನು

ಸೋಲಿಸಿ ಬಿಟ್ಟಿದ್ದನು! ಆದರೆ ಆ ಚಕ್ರವರ್ತಿಯಾದರೋ ಒಬ್ಬ ಅತಿ ಕ್ಷುದ್ರ ಭಿಕ್ಷುವನ್ನು ಸಂತುಷ್ಟ ಪಡಿಸಲಾರದೆ ಹೋಗಿದ್ದನು!

ಒಮ್ಮಿಂದೊಮ್ಮೆ ರಾಜಮಾರ್ಗದಲ್ಲಿ ಕೋಲಾಹಲವೆದ್ದಿತು. ರಾಜನು ಅಸ್ತವ್ಯಸ್ತ ಅವಸ್ಥೆಯಲ್ಲಿ ಬರಿಗಾಲಿನಿಂದ ಆ ಭಿಕ್ಷುವನ್ನು ಹಿಂಬಾಲಿಸಿ ಓಡುತ್ತಿದ್ದುದು ರಸ್ತೆಯಲ್ಲಿ ಕೂಡಿದ ಆಶ್ಚರ್ಯಚಕಿತವಾದ ಜನಸಮ್ಮರ್ದಕ್ಕೆ ಕಾಣಿಸಿತು. ರಾಜನು ಭಿಕ್ಷುವಿಗೆ ತಡೆಯಲು ಹೇಳಿದನು. ಭಿಕ್ಷು ಬೆಚ್ಚಿ ಅಲ್ಲಿಯೇ ನಿಂತುಬಿಟ್ಟನು. ತನ್ನೆದುರಿಗೆ ರಾಜನು ಬರುತ್ತಿರುವುದನ್ನು ಕಂಡು ಭಿಕ್ಷುವಿನ ಮುಖದ ಮೇಲೆ ಪುನಃ ಮುಗುಳು ನಗೆಯು ಮೂಡಿತು.

ಭಿಕ್ಷುವು ವ್ಯಂಗವಾಗಿ ಹೇಳಿದನು: "ರಾಜನೇ, ನೀನು ದೀಕ್ಷೆ ಪಡೆಯಲು ಬಂದೆಯಾ? ನಾನು ಯಾರಿಗೂ ದೀಕ್ಷೆ ಕೊಡುವುದಿಲ್ಲ.''

ರಾಜನು ಉತ್ತರವಿತ್ತನು: "ಇಲ್ಲ, ನಾನು ದೀಕ್ಷೆಪಡೆಯಲು ಬಂದಿಲ್ಲ."

"ಹಾಗಾದರೆ?"

"ನಾನು ಒಂದು ವಸ್ತುವನ್ನು ತಿಳಿಯದೆ ನಿನಗೆ ಕೊಟ್ಟುಬಿಟ್ಟಿದ್ದೇನೆ. ಮತ್ತು ನೀನು ಸಹ ಅದನ್ನು ತೆಗೆದುಕೊಂಡು ಹೋಗಿರುವೆ."

ಭಿಕ್ಷುವು ದೃಢ ಮಾತಿನಲ್ಲಿ ಹೇಳಿದನು: "ಇಲ್ಲ, ಇಲ್ಲ. ಸರ್ವಥಾ ಇಲ್ಲ."

ರಾಜನು ಹೇಳಿದನು: "ನಿಲ್ಲು, ನಿಲ್ಲು. ಮೊದಲು ನಾನು ಆ ವಸ್ತುವಿನ ಭಾರದ ಕೆಳಗೆ ನುಗ್ಗಾಗಿದ್ದೆ. ಈಗ ನೀನು ಅದನ್ನು ನಿನ್ನ ತಲೆಯ ಮೇಲೆ ಹೊತ್ತುಕೊಂಡು ಹೋಗುತ್ತಿರುವೆ!"

ಈ ಮಾತಿನ ಮೇಲೆ ವಿಶ್ವಾಸ ಹುಟ್ಟದ ಭಿಕ್ಷುವು ನಕ್ಕು ಕೇಳಿದನು: "ಆ ವಸ್ತುವಿನ ಹೆಸರಾದರೂ ಏನು? ಹೇಳು, ನೋಡುವ."

ರಾಜನು ನಿರ್ವಿಕಾರಭಾವದಿಂದ ಉತ್ತರ ಕೊಟ್ಟನು: "ಅದರ ಹೆಸರು **'ಅಹಂಕಾರ'** ಎಂದು."

ಇದನ್ನು ಕೇಳುತ್ತಲೇ ಭಿಕ್ಷುವಿನ ಮುಖದಲ್ಲಿಯ ರಕ್ತವು ಇಳಿದು ಹೋಯಿತು. ಮತ್ತು ಆ ಸಂಧ್ಯಾಕಾಲದ ಕರಿಗತ್ತಲಲ್ಲೂ ಅವನ ರಕ್ತಹೀನ ಮುಖವು ಎದ್ದು ಕಾಣಿಸುತ್ತಿತ್ತು.

("ಜೀವನ ಸಾಹಿತ್ಯ"ದಿಂದ.)

೬. ಸತ್ಯ ಮತ್ತು ಅಸತ್ಯ

(ಫ್ರಾನ್ಸಿನ ಒಂದು ಲೋಕಕಥೆ.)

ಸತ್ಯ ಮತ್ತು ಅಸತ್ಯ ಎಂಬ ಇಬ್ಬರು ಅಕ್ಕತಂಗಿಯರಿದ್ದರು. ಒಂದು ದಿನ ಅವರಿಬ್ಬರೂ ಸ್ನಾನಮಾಡಲು ನದಿಗೆ ಹೋದರು. ಬಟ್ಟೆಗಳನ್ನು ಕೆಗೆದಿಟ್ಟು ಅವರು ನದಿಯಲ್ಲಿ ಸ್ನಾನಮಾಡಹತ್ತಿದರು.

ಸ್ವಲ್ಪ ಹೊತ್ತಿನ ಮೇಲೆ ಅಸತ್ಯಳು ಮೇಲಕ್ಕೆ ಬಂದು, ಸತ್ಯಳ ಬಟ್ಟೆಗಳನ್ನು ತೊಟ್ಟುಕೊಳ್ಳಹತ್ತಿದಳು.

ಸತ್ಯಳು ಇನ್ನೂ ಸ್ನಾನಮಾಡುತ್ತಲೇ ಇದ್ದಳು. ಅವಳ ದೃಷ್ಟಿಯು ಅಸತ್ಯಳ ಕಡೆಗೆ ಬಿತ್ತು. ಅವಳು ಕೇಳಿದಳು: "ಯಾಕೆ ತಂಗೀ, ಅಸತ್ಯೆ, ನೀನು ನನ್ನ ಬಟ್ಟೆಗಳನ್ನು ಏಕೆ ತೊಟ್ಟುಕೊಳ್ಳಹತ್ತಿರುವೆ?"

ಆದರೆ ಅಸತ್ಯ ಎಲ್ಲಿ ಕೇಳುತ್ತಾಳೆ? ಅವಳು ಸತ್ಯಳ ಬಟ್ಟೆಗಳನ್ನು ತೊಟ್ಟುಕೊಂಡು ಹೋಗಿಯೇ ಬಿಟ್ಟಳು.

ಬಡ ಸತ್ಯೆಯು ಲಗುಬಗೆಯಿಂದ ನದಿಯ ದಡಕ್ಕೆ ಬಂದಳು. ಆದರೆ ಮಾಡುವುದೇನು? ಅವಳು ಬೇರೆ ಉಪಾಯವಿಲ್ಲದೆ ಅಸತ್ಯಳ ಬಟ್ಟೆಗಳನ್ನೇ ತೊಟ್ಟುಕೊಳ್ಳಬೇಕಾಯಿತು.

ಅಂದಿನಿಂದ ಜಗತ್ತಿನಲ್ಲಿ ಗೊಂದಲವೇ ಗೊಂದಲವಾಗಿ ಬಿಟ್ಟಿದೆ.

ಸತ್ಯ, ಅಸತ್ಯಗಳನ್ನು ಸೂಕ್ಷ್ಮವಾಗಿ ತಿಳಿದುಕೊಳ್ಳುವ ವಿವೇಕಶಕ್ತಿಯಿಲ್ಲದವರು, ಸತ್ಯಳ ಪೋಷಾಕು ಧರಿಸಿ ತಿರುಗುತ್ತಿರುವ ಅಸತ್ಯಳನ್ನೇ ಸತ್ಯಳೆಂದು ತಿಳಿದುಬಿಡುತ್ತಾರೆ. ಮತ್ತು ಅಸತ್ಯಳ ಪೋಷಾಕು ಹಾಕಿಕೊಂಡಿರುವ ಸತ್ಯಳ ಗುರುತು ಹತ್ತುವುದು ಸಹ ಅವರಿಗೆ ಕಷ್ಟವಾಗಿ ಬಿಟ್ಟಿದೆ.

("ಲೋಕಜೀವನ"ದಲ್ಲಿ ಮುಕುಲಭಾಯಿ.)

೭. ಸೃಷ್ಟಿಯ ಸಂದೇಶ

ಆಸ್ತಿಕನ ಆಶ್ರಮದಲ್ಲಿಯ ಪ್ರಾಯಸ್ಥ ಹುಡುಗರೆಲ್ಲರೂ ನಾಗದೇವಿಯ ಜಾತ್ರೆಗೆ ಹೋಗಿದ್ದರು. ಸಣ್ಣ ಮಕ್ಕಳು ಆಶ್ರಮದಲ್ಲಿದ್ದರು. ಅವರಿಗೆ ಬೇಸರ ಬರಬಾರದೆಂದು ಆಸ್ತಿಕನು ಅವರನ್ನು ಕರೆದುಕೊಂಡು ನದಿಗೆ

ಹೋದನು. ಮಕ್ಕಳು ನದಿಯ ನೀರಲ್ಲಿ ಆಟವಾಡಲು ಪ್ರಾರಂಭಿಸಿದರು. ಕೊಟ್ಟ ಆಟವನ್ನು ಆಡಿದರು.

"ನೋಡಿರಿ, ನನ್ನ ಕಲ್ಲು ನೀರಲ್ಲಿ ಪುಟ ನೆಗೆಯುತ್ತ ಹೋಗುತ್ತದೆ," ಎಂದನು ಶಶಾಂಕ.

"ಒಗೆ, ಹಾಗಾದರೆ,''—ಎಂದನು ಆಸ್ತಿಕ.

ಶಶಾಂಕನು ಕಲಚಿಗಲ್ಲೊಂದನ್ನು ಒಗೆದನು. ಅದು ಏಳು ಸಲ ನೀರಿನ ತಳದ ಮೇಲಿಂದ ಪುಟ ನೆಗೆಯಿತು. ಆಸ್ತಿಕನು ಒಂದು ಕಲ್ಲನ್ನು ಒಗೆದನು. ಆದರೆ, ಅದು ಒಮ್ಮೆಲೇ ಮುಳುಗಿತು.

"ನಿಮ್ಮದು ಮುಳುಗಿತು," ಎಂದನು ಶಶಾಂಕ.

"ನಿಲ್ಲು, ನಾನು ಇನ್ನೊಂದನ್ನು ಒಗೆಯುತ್ತೇನೆ," ಎಂದು ಆಸ್ತಿಕನು ಎರಡನೇ ಕಲ್ಲನ್ನು ಒಗೆದನು. ಅದು ಟನ್ ಟನ್ ಜಿಗಿಯುತ್ತ ಹೋಯಿತು. ಕೊನೆಗೆ ಅದು ಕಾಣಿಸಲೇ ಇಲ್ಲ.

"ನಿಮ್ಮ ಕಲ್ಲು ಎಷ್ಟು ಚೆನ್ನಾಗಿ ಹೋಯಿತು!'' ರತ್ನಾಕರನು ಅಂದನು.

"ಯೋಗ್ಯ ರೀತಿಯಿಂದ ಚಾಲನೆ ಕೊಟ್ಟರೆ ಕಲ್ಲು ಹಾರುವುದು; ನೀರಿನಲ್ಲಿ ತೇಲುವುದು. ಅದರಂತೆಯೇ ಮನುಷ್ಯನು ತನ್ನ ಜೀವನಕ್ಕೆ ಯೋಗ್ಯ ಗತಿಯನ್ನು, ವೇಗವನ್ನು ಕೊಟ್ಟರೆ ಅದು ಮುಳುಗುವುದಿಲ್ಲ; ಕೆಸರಲ್ಲಿ ಬೀಳುವುದಿಲ್ಲ; ಆನಂದದ ಕಡೆಗೆ ಹೋಗುವುದು,'' ಎಂದನು ಆಸ್ತಿಕ.

"ಕೆಲವು ಜನರು ಕೆಟ್ಟವರಿರುತ್ತಾರೆ,'' ಎಂದನು ಶಶಾಂಕ.

"ಅವರು ಒಳ್ಳೆಯವರಾಗುವುದಿಲ್ಲವೆ?'' ಕೇಳಿದನು ರತ್ನಾಕರ.

"ಏನು, ಶಶಾಂಕ, ಮಾವಿನ ಮಿಡಿಯು ಹೇಗಿರುತ್ತದೆ?'' ಎಂದು ಆಸ್ತಿಕನು ವಿಚಾರಿಸಿದನು.

"ಅದು ಒಗರು ಇರುತ್ತದೆ''— ಎಂದನು ಶಶಾಂಕ.

"ಅದು ಸ್ವಲ್ಪ ದೊಡ್ಡದಾದರೆ ಹೇಗೆ ಹತ್ತುತ್ತದೆ?''

"ಅದು ಸ್ವಲ್ಪ ಹುಳಿಯಾಗುತ್ತದೆ, ಹಲ್ಲುಗಳು ಚಳಿಯುತ್ತವೆ.''

"ಅದು ಇನ್ನೂ ದೊಡ್ಡದಾಗಿ ಹಣ್ಣಾದರೆ?''

"ಒಳ್ಳೇ ರುಚಿಕರವಾಗುತ್ತದೆ. ಅದರ ಬಣ್ಣ ಎಷ್ಟು ಚಂದ! ಅದರ ರಸವೆಷ್ಟು ಸವಿ!'' ಎಂದನು ಶಶಾಂಕ.

"ಶಶಾಂಕ! ಒಗರು ಮಿಡಿಯು ಹುಳಿಯಾಯಿತು. ಹುಳಿಯೇ ಮುಂದೆ ಸವಿಯಾಯಿತು. ಅದರಂತೆಯೇ ಮನುಷ್ಯ. ಕೆಟ್ಟ ಮನುಷ್ಯನು ಮುಂದೆ ಒಳ್ಳೆಯವನಾಗುವನು. ಅವನಿಗೆ ಅನುಭವಗಳು ಬರುತ್ತ ಹೋದಂತೆ ಅವನು ಬುದ್ಧಿವಂತನಾಗುವನು. ಮಿಡಿಗಳು ಹುಳಿಯೆಂದು ತೆಗೆದೊಗೆದರೆ ಮುಂದೆ ಸವಿಯಾದ ಹಣ್ಣುಗಳೇ ಸಿಗಲಾರವು. ಅಲ್ಲವೇ?"-- ಎಂದು ಆಸ್ತಿಕನು ವಿಚಾರಿಸಿದನು.

"ಮಿಡಿಯು ಎರಡು—ಮೂರು ತಿಂಗಳಲ್ಲಿಯೇ ಹಣ್ಣಾಗುತ್ತದೆ. ಮನುಷ್ಯನು ಎಷ್ಟು ದಿನಗಳಲ್ಲಿ ಹಣ್ಣಾಗುವನು ಮತ್ತು ಸವಿಯಾಗುವನು?"

"ಎಷ್ಟೋ ದಿನಗಳು ಹಿಡಿಯಲಿ, ಮನುಷ್ಯನ ಜೀವನವು ಒಮ್ಮೆ ಹಣ್ಣಾಗುವುದು ನಿಶ್ಚಿತ. ಇದನ್ನು ಮರೆಯಲಾಗದು. ನೀನು ಹಣ್ಣಾಗುವಿ. ನಾನೂ ಹಣ್ಣಾಗುವೆನು. ಎಲ್ಲರೂ ಹಣ್ಣಾಗುವರು," ಎಂದನು ಆಸ್ತಿಕ.

"ಹುಳಿ ಮಿಡಿಯು ಸವಿಯಾಗುವುದು. ಬತ್ತಿದ ನದಿಯು ತುಂಬಿ ಬರುವುದು," ಎಂದನು ಶಶಾಂಕ.

"ಒಣಗಿದ ಗಿಡವು ಚಿಗುರುವುದು. ಕತ್ತಲೆ ಕಳೆದು ಪ್ರಕಾಶವು ಬರುವುದು. ಮೊಗ್ಗಿಯಿಂದ ಹೂ, ಹೂವಿನಿಂದ ಫಲ," ಎಂದನು ರತ್ನಾಕರ.

"ಸರಸ್ಸಿನಿಂದ ಹಳ್ಳ; ಹಳ್ಳದಿಂದ ನದಿ; ನದಿಯಿಂದ ಸಮುದ್ರ," ಎಂದನು ಶಶಾಂಕ.

"ಈ ಗಂಗೆಗೆ ಎಷ್ಟು ನದಿಗಳು ಕೂಡಿವೆ ಎಂದು ಗೊತ್ತೇ ನಿಮಗೆ?" ವಿಚಾರಿಸಿದನು ಆಸ್ತಿಕ.

"ಯಮುನಾ, ಘೋಗ್ರಾ, ಗಂಡಕಿ ಮೊದಲಾದ ನದಿಗಳು ಕೂಡಿರುತ್ತವೆ."

"ಗಂಗೆಯು ಅಭಿಮಾನದಿಂದ ಸರ್ವ ಪ್ರವಾಹಗಳಿಂದಲೂ ದೂರವಿದ್ದರೆ—ಯಮುನೆಯು ಕಪ್ಪಗಿದೆ, ಗಂಡಕಿಯಲ್ಲಿ ಕಲ್ಲುಗಳು ಬಹಳ ಇವೆ, ಘೋಗ್ರಾ ದೊಡ್ಡ ಸಪ್ಪಳವನ್ನು ಮಾಡುತ್ತದೆ, ಶೋಣವು ಎಚ್ಚರವಿಲ್ಲದೆ ಹರಿಯುತ್ತದೆ--ಎಂದು ಗಂಗೆಯು ಅನ್ನುತ್ತ ಈ ನದಿಗಳನ್ನು ತನ್ನಲ್ಲಿ ಸೇರಿಸಿಕೊಳ್ಳದಿದ್ದರೆ ಏನಾಗುತ್ತಿತ್ತು?" ಎಂದು ಆಸ್ತಿಕನು ವಿಚಾರಿಸಿದನು.

"ಗಂಗೆಯು ಕಾವಲಿಯಂತಿರುತಿತ್ತು; ಮತ್ತು ಕೂಡಲೇ ಬತ್ತಿ ಹೋಗುತ್ತಿತ್ತು"—ಎಂದನು ಶಶಾಂಕ

"ಅಭಿಮಾನದಿಂದ ನೀವು, ಬೇರೆಯಾಗಿ ಉಳಿದಿರೆಂದರೆ ಅಳಿಯು ವಿರಿ. ಪ್ರೇಮದಿಂದ ಸರ್ವ ಸಂಗ್ರಾಹಕರಾದರೆ ಉಳಿಯುವಿರಿ—ಎಂದೇ ಸೃಷ್ಟಿಯ ಸಂದೇಶವಿದೆ"—ಎಂದು ಆಸ್ತಿಕನು ನುಡಿದನು.

(ಸಾನೆ ಗುರೂಜಿಯವರ "ಆಸ್ತಿಕ"ದಿಂದ ಆಯ್ದುದು)

Edited, Printed & Published by K. V. Shenoy
at The Prabhat Printers, Ltd., Mangalore.